Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 235 | ಶನಿವಾರ 17—5—47 | ಬಿಡಿ ಪ್ರತಿ ೩ ಪೈ

ವೇಶ್ಯೆಯರ ಪ್ರತಿಭಟನೆ

ಬ್ರಿಟಿಷರು ಪಾಪಸಾಗುವ ಬಗ್ಗೆ

'ಭಾರತವನ್ನು ಬಿಟ್ಟು ಹೊರಡಿ' ಎಂಬ ತೀರ್ಮಾನದ ವಿರುದ್ಧ ಕಾಶಿಯ ವೇಶ್ಯೆಯರು ಒಂದು ಚಳವಳಿ ಹೂಡಿರುವರು. ಇದು ಮತ್ತು ಕಾಂಗ್ರೆಸ್ ಮಂತ್ರಿಮಂಡಲದ ವಿರೋಧ ಕಾರ್ಯಕ್ರಮದಿಂದ ತಮ್ಮ ವ್ಯಾಪಾರಕ್ಕೆ ಭಾರಿ ದಕ್ಕೆಯೆಂದು ಅವರ ಅಭಿಪ್ರಾಯ. ಬ್ರಿಟೀಷರು ಭಾರತವನ್ನು ಬಿಡಬಾರದೆಂದು. ಅವರು ವೈಸರಾಯರಿಗೆ ಅರಿಕೆ ಮಾಡಿರುವರಂತೆ.

ಊಟಕ್ಕೆ ೨೦ ಸಾವಿರ ಡಾಲರ್

ಚೈನಾದಲ್ಲಿ ಆಹಾರ ಬೆಲೆ ಏರಿದ ಪರಿಣತಿ ಏನಿದೆ. ಅಲ್ಲಿಯಂದು ಹೋಟಲಿನ ಒಂದು ಹೊತ್ತು ಊಟಕ್ಕೆ 20 ಸಾವಿರ ಚೈನಾ ಡಾಲರ್. ಹೋದ ವರ್ಷ 3 ಸಾವಿರವಿತ್ತು !

ಮಿರ್ಜಾರವರ ಮೇಲೆ ಟೀಕೆ

ಹೈದ್ರಾಬಾದ್ ಮೇ 15 — ಮುಜ್ಲಿಸ್ ಇತೆಹಾದ್ - ಉಲ್ ಮುಸ್ಲಿಮೀನ್ ವಾರ್ಷಿಕ ಸಮಾವೇಶದಲ್ಲಿ, ರಜಪುಟಾನ ಸಂಸ್ಥಾನಗಳ ಮುಸ್ಲಿಂ ಏಜೆಂಟ್ ಅಧ್ಯಕ್ಷರಾದ ಮಿ|| ಅಬ್ದುಲ್ ಹಾಯ್ ಫೈಜ್‌ರವರು (ಜೈಪುರದಿಂದ ಆಗಮಿಸಿದವರು) ಜೈಪುರದಲ್ಲಿ ಮುಸ್ಲಿಮರು ಅಸಹ್ಯವಾಗಿ ಕಾಣಲ್ಪಟ್ಟರೆಂದೂ ಮತ್ತು ನ್ಯಾಯವಾದ ಹಕ್ಕುಗಳನ್ನೂ ತಿರಸ್ಕರಿಸಿದರೆಂದೂ ತಿಳಿಸಿದರು. ಅವರು ಸರ್ ಮಿರ್ಜಾರವರು ಜೈಪುರದಲ್ಲಿ ಪ್ರಧಾನಿಯಾಗಿ ಅಡಳಿತ ನಡೆಸಿದ್ದನ್ನು ಟೀಕಿಸಿದರು.

ಪಾಕೀಸ್ತಾನ ರಾಜ್ಯಾಂಗ ರಚನಾ ಸಭೆ ಕರಾಚಿಯಲ್ಲಿ ಸೇರುವುದೇ !

ಸನದೆಹಲಿ ಮೇ 15 — ಬ್ರಿಟಿಷರು ಭಾರತಕ್ಕೆ ಅಧಿಕಾರವನ್ನು ಹಸ್ತಾಂತರ ಮಾಡುವುದಂದ ಪಾಕೀಸ್ತಾನ ಪ್ರದೇಶಗಳ ಅಧಿಕಾರವನ್ನು ಮುಸ್ಲಿಂ ಲೀಗಿನವರು ತೆಗೆದು ಕೊಳ್ಳಬೇಕು. ಇದಕ್ಕಾಗಿ ಪಾಕೀಸ್ತಾನ ರಾಜ್ಯಾಂಗ ರಚನಾ ಸಮಿತಿ ಬೇಗಲೆ ಸೇರಬೇಕು. ಕರಾಚಿಯಲ್ಲಿಯೇ? ಏಕೆಂದರೆ ಅದಕ್ಕೆ ಹಗುಣ ಯೋಗ್ಯವಾಗಿರುವುದರಿಂದ. ಪಾಕೀಸ್ತಾನ ರಾಜ್ಯಾಂಗ ಸಭೆ ಲಾಹೋರ್ ಅಥವಾ ಕಲ್ಕತ್ತಾ ಬದಲು ಅಲ್ಲೇ ಸೇರಬೇಕೆಂದು ನಾವು ಸಲಹೆ ಮಾಡಿದ್ದೇವೆ - ಎಂದು ಸಿಂಧ್ ಸರ್ಕಾರದ ಅಭಿವೃದ್ಧಿ ಸಲಹೆಗಾರರಾದ ಮಿ|| ಗಜ್ನಫಾರ್ ತಿಳಿಸಿದ್ದಾರೆ.

ಸುಹ್ರಾವರ್ದಿ ಹೈದ್ರಾಬಾದ್ ಪ್ರಧಾನಿ ಆಗುವುದಿಲ್ಲ

ಕಲ್ಕತ್ತಾ ಮೆ 16 — ಬಂಗಾಳ ಪ್ರಧಾನಿ ಮಿ| ಸುಹ್ರಾವರ್ದಿ, ಹೈದ್ರಾಬಾದ್ ಪ್ರಧಾನಿ ಪಟ್ಟವನ್ನು ಒಪ್ಪಿಕೊಳ್ಳುವರೆಂಬ ಬಂದು ಪೂಹಾಪೋಹವನ್ನು ತಿರಸ್ಕರಿಸಿದ್ದಾರೆ.

ವಿವಿಧ ವರ್ತಮಾನ

ಲಕ್ನೋದಲ್ಲಿ ಮರ್ಚೆಂಟ್ ಬ್ಯಾಂಕರ್ ಆಗಿದ್ದ ಹಣವಂತನಾದ ಭಿಕ್ಷುಕನಿದ್ದಾನೆ ಇವನ ಆದಾಯ ದಿನಕ್ಕೆ 40 ರೂಪಾಯಿಗಳು.

ವರ್ಷಂಪ್ರತಿ 50 ಸಾವಿರ ರೂಪಾಯಿಗಳನ್ನು ವ್ಯಯಮಾಡಿ ತಪ್ಪಿಕಸ್ಥರಾದ ಬಾಲಜಾಲಕಿಯರನ್ನು ಸತ್ಪ್ರವರ್ತನೆಗೆ ತರುವ ಜೈಲನ್ನು ಏರ್ಪಡಿಸಲು ಸೈಜಾಂ ಸರಕಾರದವರು ತೀರ್ಮಾನ ಮಾಡಿರುವರು.

ಇಟಲಿ ಶಾಸನ ಸಭೆಯಲ್ಲಿ ಕಮ್ಯೂನಿಸ್ಟರೂ, ತದ್ವ್ಯತಿರೇಕರೂ ಮುಷ್ಟಿಯುದ್ಧ ಮಾಡಿದರು.

100 ಮಿಲಿಯ ಡಾಲರುಗಳ ಬೆಲೆಯ ಜಪಾನೀ ಆಸ್ತಿಯು ಅಮೇರಿಕಾದಲ್ಲಿಯೇ ಇರುತ್ತವೆ.

ರೋಹಿಲುಖಂಡ್, ಲಕ್ನೋ ಪ್ರಾಂತ್ಯಗಳಲ್ಲಿ ಮುಸಲ್ಮಾನರ ಮತ್ತು ಹರಿಜನರ ಸಂಖ್ಯೆ ಹೆಚ್ಚಾಗಿರುವುದರಿಂದ ಆ ಎರಡನ್ನೂ ಕಲ್ಪಿಸಿ ಸ್ವತಂತ್ರ ರಾಷ್ಟ್ರವಾಗಿ ಏರ್ಪಡಿಸಬೇಕೆಂದು ಮುಸ್ಲಿಂ ಲೀಗಿನವರು ತೀರ್ಮಾನಿಸಿಕೊಂಡಿರುತ್ತಾರೆ.

ಹಿಂದೂ ಮಹಾ ಸಭೆ

ಕೋಲಾರ ಮೇ 12

ಮೈಸೂರು ಸಂಸ್ಥಾನದ ಹಿಂದೂ ಮಹಾಸಭಾ ಆರ್ಗನೈಜರ್ ಸೆಕ್ರಟರಿಗಳಾದ ಶ್ರೀ ಎಸ್. ವೆಂಕಟವೀರಯ್ಯನವರು ಕೋಲಾರ ಜಿಲ್ಲಾ ಪ್ರವಾಸ ಕೈಗೊಂಡಿರುತ್ತಾರೆ. ಮುಳಬಾಗಿಲಿನಲ್ಲಿ ಹಿಂದೂ ಸಮಿತಿ ಸ್ಥಾಪಿಸಲಾಯಿತು.

ರಾಬರ್ಟ್‌ಸನ್‌ಪೇಟೆಯಲ್ಲಿ ಸ್ಥಳೀಯ ಹಿಂದೂ ಮುಖಂಡರು ಉದಾತ್ತ ದಿಂದ 'ಹಿಂದೂ ಅನಾಥರಕ್ಷಣಾಲಯ'ವನ್ನು ಸ್ಥಾಪಿಸುವ ಏರ್ಪಾಡು ನಡೆದಿದೆ

ಶ್ರೀ ಹೆಚ್. ಕೆ. ಸ್ವಾಮಿಆಚಾರ್ಯರು ಕೋಲಾರ ಜಿಲ್ಲೆಯಲ್ಲಿ ಹಿಂದೂಸ್ಥಾನ ರಾಷ್ಟ್ರೀಯ ರಕ್ಷಣಾದಳವನ್ನು ಸ್ಥಾಪಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ಜರೂಸೆಲಂ ಮೆ 14 — ಕ್ಯಾಂಪ್ ಸಿನಿಮಾದಲ್ಲಿ ಬಾಂಬು ಸ್ಫೋಟವಾಗಿ ಇವರು ಬ್ರಿಟಿಷ್ ಸೈನ್ಯಾಧಿಕಾರಿಗಳಿಗೆ ಗಾಯವಾಯಿತು.

ಅಕ್ಕ ತಂಗಿಯರಿಗೆ ಸ್ವಾಗತ !

ಸೌಭಾಗ್ಯ, ಸೌಂದರ್ಯ, ಸೊಗಸುಗಳಿಗೆ ಸನ್ಮತವಾದ

ಬಳೆಗಳೂ

ಅಂದ, ಚಂದ, ಅಲಂಕಾರಗಳಿಗೆ ಅತ್ಯುತ್ತಮ

ರಿಬ್ಬನ್‌ಗಳೂ

ಬಂಧು ಬಾಂಧವರಿಗೆ ಬಳುವಳಿ ಕೊಡುವ ಬಹುಮಾನದ ಸಾಮಾನುಗಳು ಬಂದಿವೆ ನಿಮಗಾಗಿ ಸಿದ್ಧವಾಗಿದೆ. ಇಂದೇ ಖರೀದು ಕೊಂಡುಹೋಗಿ.

ನಾಳೆ ಬಂದು ನಿರಾಶರಾಗಬೇಡಿ

ಜಯಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸ್

ದೇವರಾಜ ಮಾರ್ಕೆಟ್ — ಮೈಸೂರು

ಭೂಲೋಕ ಸ್ವರ್ಗ

ದಕ್ಷಿಣ ಆಫ್ರಿಕಾ ಭೂಲೋಕ ಸ್ವರ್ಗವೆಂದು ಜನರಲ್ ಸ್ಮಟ್ಸ್‌ರ ಹೇಳಿಕೆ. ಇದು ಸ್ವರ್ಗವಲ್ಲ ನರಕವೆಂದು ಅಟ್ಲಿಕಸ್ಸೆಯು ವಾದ. ಬ್ರಿಟೀಷು ಪ್ರಧಾನಮಂತ್ರಿಯು ಸೋದರಿಯು ಕಳೆದ ಎರಡು ದಶಾಬ್ದಗಳಿಂದ ಕೇಪ್ ರಾಷ್ಟ್ರದಲ್ಲಿ ಬಣ್ಣದ ಜಾತಿಗಳವರ ಉದ್ಧಾರಕ್ಕಾಗಿ ಕೃಷಿ ಮಾಡುತ್ತಿರುವಳು. ಆಕೆಯು 30-4-47 ರಲ್ಲಿ ಲಂಡನ್ ರಾಯಲ್ ಸೊಸೈಟಿ ಸಭೆಯಲ್ಲಿ ಹೀಗೆ ಹೇಳಿದಳು —

ಬಣ್ಣದ ಜಾತಿಗಳವರ ಕಣ್ಣುಗಳಿಂದಲೂ ಕಿವಿಗಳಿಂದಲೂ ಕೇಪ್ ರಾಷ್ಟ್ರದ ಜೀವನವನ್ನೂ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ ಒಂದೊಂದು ವಿಷಯವನ್ನೂ ಳೆಳಿದಂತೆಲ್ಲಾ ನೋಡಿದುತೆಲ್ಲಾ ಬಣ್ಣದ ಜಾತಿಗಳಲ್ಲಿ ಹುಟ್ಟಿರುವಿಕೆಯು ಎಷ್ಟು ಘೋರವೋ ತಿಳಿಯಹಂದಿತು. ಈಗ ಇರುವಂತೆ ಈ ಜಾತಿಗಳು ಇನ್ನೂ ಎಷ್ಟು ಕಾಲ ಸಹಿಸಿಕೊಂಡಿರಲು ಭಕ್ಕೆ ಶ್ರದ್ಧೆಗಳೊಂದಿಗೆ ಇರುವರೆಂಬುದು ನಿಮ್ಮ ಭಾವನೆ? ಶ್ವೇತವರ್ಣದವರಲ್ಲಿ ಅವರಿಗಿರುವ ಭಕ್ತಿ ಭಾವ ಸಹನೆಗಳು ನಿಜವಾಗಿ ಆಶ್ಚರ್ಯಕರಗಳು. ಇಷ್ಟಕ್ಕೂ ಅವರ ಮಕ್ಕಳಿಗೆ ಓದು ಸಾಲದು. ಈಗ ಅವರಿಗಿರುವ ಪಾಠಶಾಲೆಗಳನ್ನು ಮೂರರಷ್ಟು ಹೆಚ್ಚಿಸುವದು ಅಗತ್ಯವು ದಿನ ದಿನಕ್ಕೆ ರಾಗು ಜಾತಿಗಳವರಿಗೆ ಅಂಗಾಲಿನ ಉರಿಯು ಹೆಚ್ಚುತ್ತಿದೆಯೆಂದರಿಯಿರಿ.

ಹೊಗೆಸೊಪ್ಪಿನ ಸಂಘಗಳು

ಮದರಾಸು ಕಾಂಗ್ರೆಸ್ ಮಂತ್ರಿವರ್ಗದವರು ಆಹಾರ ಸಂಘಗಳನ್ನು ರದ್ದು ಮಾಡಿ, ಹೊಗೆಸೊಪ್ಪಿನ ಸಂಘಗಳನ್ನು ಏರ್ಪಡಿಸಲಿರುವರು. ಇವರ ದೃಷ್ಟಿಯಲ್ಲಿ ಪ್ರಜೆಗಳೆಲ್ಲರಿಗೂ ಅತ್ಯವಶ್ಯಕವಾದದ್ದು ಹೊಗೆಸೊಪ್ಪು. ಅನ್ನವು ಸಿಗದಿದ್ದರೂ ಹೊಗೆಸೊಪ್ಪು ಸಿಕ್ಕಿದಲ್ಲಿ ಸಾಕು !

ಲಕ್ನೋ ಮೆ 13 — ಮಧ್ಯಪ್ರಾಂತ್ಯ ಸರಕಾರವು ಕೇಂದ್ರ ಸರಕಾರಕ್ಕೆ ಬಟ್ಟೆ ನಿಯಂತ್ರಣವನ್ನು ತೆಗೆದು ಹಾಕಲು ಬಲವತ್ತಾದ ಅರಿಕೆ ಮಾಡಿದೆ

ನ್ಯೂಯಾರ್ಕ್ ಮೆ 14 — ಮಿ|| ಡಬ್ಲ್ಯೂ ಚರ್ಚಿಲ್ಲರು ತಮ್ಮ ಆತ್ಮ ಕಥೆಯನ್ನು ಅಮೇರಿಕಾ ಲೈಫ್ ಪತ್ರಿಕಾ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗಳಿಗೆ 10 ಲಕ್ಷ ಡಾಲರುಗಳಿಗಿಂತ ಹೆಚ್ಚು ಬೆಲೆಗೆ ಮಾರಾಟವಾಗಿರುವರೆಂದು ತಿಳಿಯಬರುತ್ತದೆ. ಆ ಪತ್ರಿಕೆಗಳಲ್ಲಿ ಇದು ಕ್ರಿಸ್ತಮಸ್ಸಿನಲ್ಲಿ ಪ್ರಾರಂಭವಾಗಲಿದೆ.

ವರ್ತಮಾನ ಸಂಗ್ರಹ

ಶ್ರೀ ರಂಗಪ್ಪಯಾದವಂವರು ತಾ ॥ 12 ರಲ್ಲಿ ಜರುಗಿದ ತಮ್ಮ ವಿವಾಹ ಸಂದರ್ಭದಲ್ಲಿ ಮೈಸೂರು ನಗರದ ಹಿಂದೂವಿದ್ಯಾಸಭೆಗೆ ಐದು ರೂಪಾಯಿ ಕಾಣಿಕೆಯಿತ್ತಿದ್ದಾರೆ.

ಮೈಸೂರು ಸಂಸ್ಥಾನದ ಕಾಡುಜಾತಿ ಮೊದಲಸೆಯ ಸಭೆಯು, ಗೃಹ ಸಚಿವರಾದ ರಾಜಕಾರ್ಯ ಪ್ರಸಕ್ತ ಶ್ರೀ ಎಂ. ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಹೆಗ್ಗಡದೇವನಕೋಟೆ ತಾ | ಬೀರಂಬಳ್ಳಿ–ಬೇಗೂರು ಫಾರೆಸ್ಟ್ ಲಾಡ್ಜ್‌ನಲ್ಲಿ ಇದೇ ತಾರೀಖು 19 ರಲ್ಲಿ ಜರುಗುತ್ತದೆ.

ಸೂಚನೆ : ದೇಶದಲ್ಲಿ ಧರ್ಮರಕ್ಷಣೆ ಸಂಬಂಧವಾದ ಹಲವು ಮಹತ್ವಪೂರ್ಣ ವಿಚಾರಗಳ ಕಾರ್ಯಕ್ರಮದ ಸಲುವಾಗಿ ನಿನ್ನೆ ನಮ್ಮ ಪತ್ರಿಕೆ ಪ್ರಕಟವಾಗಲಿಲ್ಲ — ವ್ಯಾ ಸ.

Edited, Printed and Published by M. S Krishna Rao at the Satyavadi Press Chamaraj Agrahar, Mysore.

At Opera

5 ನೇ ವಾರ

ಟಿ. ಎಸ್. ಬಾಲಯ್ಯ,
ತಪಮಣಿದೇವಿ, ಮಾಲತಿ,
ರಾಮಚಂದ್ರ ನಟಿಸಿರುವ

ರಾ ಜ ಕು ಮಾ ರಿ

(ತಮಿಳು)

ನೇಪಾಳ - ಅಮೆರಿಕಾ

ಈ ಎರಡು ರಾಜ್ಯಗಳಿಗೂ ವ್ಯಾಪಾರ ಬಾಂಧವ್ಯಕರಾರು ಆಯಿತು. ನೇಪಾಳವು ಬಯಲಿರುವ ಅಮೇರಿಕಾ ವ್ಯಾಪಾರಿಗಳನ್ನು ಸ್ವದೇಶೀಯರಿಗಿಂತ ಭಿನ್ನವಾಗಿ ನೋಡಕೂಡದೆಂಬ ಒಪ್ಪಂದವಾಗಿದೆ. ಇದು ಏಷ್ಯಾದಲ್ಲಿ ದಕ್ಷಿಣ ಪ್ರಾಂತ್ಯಕ್ಕೆಲ್ಲಾ ಪ್ರಾಮುಖ್ಯವಾದ ಸ್ನೇಹವೆಂದು ಅಮೆರಿಕಾ ಸಾರುತ್ತಿದೆ. ನೇಪಾಳಕ್ಕೆ ಅಮೇರಿಕಾ ಜಾಪಾಳಾ ಪ್ರಯೋಗಿಸಿಶು. ಭೇಷ್!

ರಾಷ್ಟ್ರ ವಿಭಜನೆಯು ಹಳೆಯ - ಮಾತು

ಬಂಗಾಳವು ಲಾರ್ಡ್ ಕರ್ಜನ್‌ರ ಕಾಲದಲ್ಲಿ ಇಬ್ಭಾಗವಾಗಿ ಮಾಡಲ್ಪಟ್ಟು ತರುವಾಯು ಒಂದಾಗಿ ಮಾಡಲ್ಪಟ್ಟಿತು. 1901 ರಲ್ಲಿ ವಾಯವ್ಯ ಸರಹದ್ದು ರಾಷ್ಟ್ರವನ್ನು ಪಂಜಾಬಿನಿಂದ ಬೇರ್ಪಡಿಸಿದರು. 1937 ರಲ್ಲಿ ಸಿಂಧು ಉಶ್ಶಳ ರಾಷ್ಟ್ರಗಳು ಏರ್ಪಟ್ಟವು. ಈಗ ಕೂಡ ಅದೇ ರೀತಿಯಲ್ಲಿ ಪಂಜಾಬು ಬಂಗಾಳ ಪ್ರಾಂತ್ಯಗಳನ್ನು ವಿಭಜನೆ ಮಾಡಬಹುದು. ಹಾಗೂ ಭಾಷಾ ಪ್ರಯುಕ್ತ ರಾಷ್ಟ್ರ ವಿಭಜನೆಯೂ ನಶೆಯಿಂದ ಒಹುದು.

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ

ನೋಟಿಫಿಕೇಷನ್

No. R-188/1946-47

ತಾರೀಖು 14–5–1947

ಇದರಿಂದ ಮೈಸೂರು ನಗರದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ : —

ಮೈಸೂರು ಸಿಟಿಯಲ್ಲಿ ತೊಗರಿಬೇಳೆ ಅಭಾವವಿರುವುದರಿಂದಲೂ, ಹೊರಗಿನಿಂದ ದಾಸ್ತಾನು ಬರತಕ್ಕ ಸಂಭವ ಸಹ ಇಲ್ಲದಿರುವುದರಿಂದಲೂ, ಜನರು ನಿತ್ಯಗಟ್ಟಲೆ ಉಪಯೋಗಕ್ಕೆ ಹೆಸರು, ಕಡಲೆ ವಗೈರೆ ದ್ವಿದಳ ಧಾನ್ಯಗಳನ್ನು ಹೆಚ್ಚಾಗಿ ಉಪಯೋಗಿಸಬೇಕಾಗಿ ತಿಳಿಯಪಡಿಸಿರುತ್ತೆ.

(sd) R. Ramachandra Rao
Bhombore
Chief Rationing Officer
Mysore City.

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯ ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏಸೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಿಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ತಿಳಿಸಲಾಗಿದೆ.

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್

ಹರಾಜು ಇಸ್ತಿಹಾರ್

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ —

ಜಯಲಕ್ಷ್ಮಿಪುರಂನಲ್ಲಿ ಸಿನಿಮಾ ಮಂದಿರವನ್ನು ಕಟ್ಟಲು ಒಂದು ಭಾರಿ ನಿವೇಶನವನ್ನು ಇದೇ ಮಾಹೆ ತಾ ॥ **26** ನೇ ಸೋಮವಾರ ಬಹಿರಂಗವಾಗಿ ನಿವೇಶನದ ಬಳಿ ಬೆಳಿಗ್ಗೆ 10 ಘಂಟೆಗೆ ಹರಾಜು ಮಾಡಲಾಗುತ್ತೆ.

ಹೆಚ್ಚಿಗೆ ವಿವರಗಳನ್ನು ಮೇಲ್ಕಂಡ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋರೆ,
ಛೇರ್ಮನ್.